ಬೇರೆ ಕಾರಣಗಳಿಂದ ಸಮಿತಿ ಸಭೆ ಸೇರದೇ ಇರುವುದರಿಂದ ಆದಷ್ಟು ಬೇಗ ಈ ಅಕ್ರಮ ಒತ್ತುವರಿಯನ್ನು ಸಕ್ರಮಗೊಳಿಸುವ ಸಮಿತಿಗಳನ್ನು ರೂಪಿಸಬೇಕಾಗಿದೆ. ಅವುಗಳ ಮೂಲಕ ಭೂಮಿ ಮಂಜೂರಾದವರಿಗೆ ಹಕ್ಕುಪತ್ರವನ್ನು ತುರ್ತಾಗಿ ವಿತರಣೆ ಮಾಡಬೇಕೆಂದು ಈ ಸದನದ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94-ಎ, ಇದನ್ನು ಕಾಯ್ದೆಯದಲ್ಲಿ ಸೇರ್ಪಡಿಸಿ ಕೆಲವು ವಿಶಿಷ್ಟ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಕೆರೆ ಅಂಗಳ, ಗುಂಡುತೋಪು, ಅಮೃತ್ ಮಹಲ್ ಕಾವಲ್ ಮುಂತಾದ ಜಮೀನುಗಳನ್ನು ಹೊರತುಪಡಿಸಿ, ಗೋಮಾಳ ಸೇರಿದಂತೆ ಉಳಿದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಯನ್ನು ಸಕ್ರಮೀಕರಣಗೊಳಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ. ಸದರಿ ಉಪ ಕಲಂ 94-ಎ ಇದರಂತೆ ಬಗರ್ ಹುಕುಂ ಸಾಗುವಳಿ ಜಮೀನು ಸಕ್ರಮೀಕರಣ ಸಮಿತಿಗೆ ತಾಲ್ಲೂಕಿನ ಶಾಸಕರು ಅಧ್ಯಕ್ಷರಾಗಿದ್ದಾರೆ. ಅರ್ಜಿ ಹಾಕಲು ಕಡೆ ದಿನವಾದ 19-9-1991 ರವರೆಗೆ ಒಟ್ಟು 10,86,826 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳ ಪೈಕಿ 6,25,425 ಅರ್ಜಿಗಳು ವಿಲೇವಾರಿಯಾಗಿದ್ದು, ಇನ್ನು 4,61,401 ಅರ್ಜಿಗಳು ಬಾಕಿ ಇರುತ್ತವೆ. ಈಗ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಸಮಿತಿಗೆ ಉಪ ವಿಭಾಗಾಧಿಕಾರಿಗಳು ಅಥವಾ ತತ್ಸಮಾನ ಕಂದಾಯ ಅಧಿಕಾರಿಗಳು ಅಧ್ಯಕ್ಷರಾಗಿರುವುದು ಪ್ರಕರಣಗಳ ವಿಲೇವಾರಿ ದೃಷ್ಟಿಯಿಂದ ಸೂಕ್ತವೆಂದು ಮನಗಂಡು ಈ ರೀತಿ ಉಪ ವಿಭಾಗಾಧಿಕಾರಿಗಳು ಅಥವಾ ತತ್ಸಮಾನ ಕಂದಾಯ ಅಧಿಕಾರಿಗಳನ್ನು ಸಮಿತಿ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕಾಗಿ ಕಲಂ 94-ಎ ಇದಕ್ಕೆ ತಿದ್ದುಪಡಿ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಆದಷ್ಟು ಶೀಘ್ರವಾಗಿ ಈ ಸಮಿತಿಗಳನ್ನು ಪುನರ್ ರಚಿಸಲಾಗುವುದು.

ಶಾಸನಾತ್ಮಕ ನಿರ್ಣಯ

ಅಧ್ಯಕ್ಷರು : ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು) ಅವರು ನಿರ್ಣಯವನ್ನು ಮಂಡಿಸುವುದು.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನವ ಅಂಗಾಂಗಗಳ ಬದಲಿ ಜೋಡಣೆ ಅಧಿನಿಯಮ, 1994 (1994ರ ಕೇಂದ್ರ ಅಧಿನಿಯಮ 42)ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಬೇಕೆಂಬ ನಿರ್ಣಯವನ್ನು ಮಂಡಿಸಲು ತಮ್ಮ ಒಪ್ಪಿಗೆಯನ್ನು ಕೋರುತ್ತೇನೆ.

(ನಿರ್ಣಯವನ್ನು ಮಂಡಿಸಲಾಯಿತು)

ಶ್ರೀ ಎ.ಬಿ. ಪಾಟೀಲ್ : ನಿರ್ಣಯವನ್ನು ಸದನ ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ. ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಿಮ್ಮದೇನೂ ಅಮೆಂಡ್‌ಮೆಂಟ್ ಇಲ್ಲವೇ?

ಅಧ್ಯಕ್ಷರು : ಇದನ್ನು ಕೇಂದ್ರದಲ್ಲಿ ಈಗಾಗಲೇ ಅಳವಡಿಸಿಕೊಂಡಿದ್ದಾರೆ. ನೀವು ಇಲ್ಲಿ ಏನಾದರೂ ಅಮೆಂಡ್‌ಮೆಂಟ್ ಸೂಚನೆ ಮಾಡಿದ್ದೀರಾ ಎಂದು ಅವರು ಕೇಳುತ್ತಿರುವುದು.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅವಶ್ಯಕತೆ ಬಿದ್ದರೆ ನಾವು ಅಮೆಂಡ್‌ಮೆಂಟ್ ಮಾಡುತ್ತೇವೆ. ಇದು ಅಂಗಾಂಗಗಳ ಬದಲಿ ಯಾವ ರೀತಿ ಮಾಡಬೇಕು ಮತ್ತು ಎಕ್ಸ್‌ಪರ್ಟ್ ಕಮಿಟಿ.

ಅಧ್ಯಕ್ಷರು : ನಂಜೇಗೌಡರೇ, ತಾವು ಒಂದು ಕೆಲಸ ಮಾಡಿ. As and when situation arises, we can make amendments. You can study the proposed enactment in detail and offer our suggestion.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ತರುವುದಕ್ಕೆ ಆಗುವುದಿಲ್ಲ.

(ಗೊಂದಲ)

ಡಾ॥ಜೀವರಾಜ ಆಳ್ವ : ಪೋಸ್ಟ್ ಕಿಡ್ನೀದು ರಾಕೆಟ್ ಆಯಿತಲ್ಲಾ. ಅದಾದಮೇಲೆ ಏನಾದರೂ ಸರಿ ಅಥವಾ ತಪ್ಪು ಅಂಥಹದ್ದು ಎಂದು ಅಷ್ಟೆ. I leave it to the wisdeom of the Chair. ಬರೀ ಕನ್‌ಕರೆಂಟ್ ಆಗಿ ಯಸ್ ಎಂದು ಹೇಳಿಕೊಳ್ಳುವ ಬದಲು....

Mr. Speaker : The Chair seeks the advice of veteran Members like Mr. Veerappa Moily, who are sound enough on legal aspects

Sri H.N. Nanje Gowda : The point is, we are implementing that Central law in this State also. ಈಗ ಮಾಡುತ್ತಿದ್ದೀರಿ, ಅದು ಸ್ವಾಗತಾರ್ಹ. ಈ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಅದನ್ನು ಮಾಡತಕ್ಕ ಕಾಲದಲ್ಲಿ ಏನಾದರೂ ಹೆಚ್ಚಿನ ಅಮೆಂಡ್‌ಮೆಂಟ್ ಮಾಡಿಕೊಂಡು ಮಾಡುವುದರ ಅವಶ್ಯಕತೆ ಇದೆಯೋ ಅಥವಾ ಅದೇ ಸಾಕು ಅಂತ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಈಗ ರೆಸಲ್ಯೂಷನ್ ತಂದಿರಿ. ಸೆಂಟ್ರಲ್‌ಆಕ್ಟ್ ಏನಿದೆ, ಅದನ್ನು ನೀವು ನಮಗೆ ಸರ್ಕ್ಯುಲೇಟ್ ಮಾಡಿಲ್ಲ. ಹಾಗೆ ಮಾಡಿದ್ದರೆ ನಾವು ಅದನ್ನು ಓದಿಕೊಂಡು ಬರುತ್ತಿದ್ದೆವು. ಹಾಗೆ ಮಾಡಿದ್ದರೆ ನಮಗೆ ಏನು ಸರಿ ಇದೆ, ಏನು ಸರಿಯಿಲ್ಲ ಎಂದು ಹೇಳುವುದಕ್ಕೆ ಅವಕಾಶ ಇರುತ್ತಿತ್ತು. ಆದರೆ ಅದನ್ನು ನಾವು ನೋಡದೇ ಇರುವುದರಿಂದ ಕೊನೆಯಪಕ್ಷ ಸರ್ಕಾರ ಅದನ್ನು ನೋಡಿದ್ದರೆ. whether the teeth in the present law as enunciated by the Government are sufficient or not. ಅದನ್ನು ಯೋಚನೆ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ನಮ್ಮ ಇಲಾಖೆಯ ಅಧಿಕಾರಿಗಳು ಇದನ್ನು ಸಭೆ ಮಾಡಿ ಚರ್ಚೆ ಮಾಡುವಂಥ ಕಾಲದಲ್ಲಿ ಇದು ಒಂದೇ ಒಂದು ಸಣ್ಣ ದೋಷವೆಂದು ಕರೆಯಬಹುದು. ಹಿಂದೆ ಇದನ್ನು ಕೇಂದ್ರ ಸರ್ಕಾರದವರು ತಂದರು. ರಾಜ್ಯ ಸರ್ಕಾರದವರು ಇದನ್ನು ಆಗಲೇ ಒಪ್ಪಿ ಅಡಾಪ್ಟ್ ಮಾಡಿಕೊಂಡಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಲೇ ಇರಲಿಲ್ಲ. ಈಗ ಮುಂದಿನ ವಿಧಾನಸಭೆಯಲ್ಲಿ ಇದನ್ನು ಅಡಾಪ್ಟ್ ಮಾಡುವುದಕ್ಕೆ ಈ ರೆಸಲ್ಯೂಷನ್ ಅನ್ನು ತರಬೇಕೆಂದು ಹೇಳಿ, ಸಭೆಯ ಮುಂದೆ ಇಡಲಾಗಿದೆ. ಸಭೆ ಇದಕ್ಕೆ ಒಪ್ಪಿಗೆ ಕೊಟ್ಟಿದೆ. ನಾನೇನೂ ತಜ್ಞ ಅಲ್ಲ. ನಮ್ಮ ವೈದ್ಯಕೀಯ ಇಲಾಖೆಯವರು ಕೊಟ್ಟಂಥ ಒಂದು ಅಭಿಪ್ರಾಯದ ಮೇಲೆ ಈ ಸೆಂಟ್ರಲ್ ಆಕ್ಟ್ ಏನಿದೆ, ಇದರಲ್ಲಿ ಸಾಕಷ್ಟು ಪ್ರಿಕಾಷನ್ಸ್‌ನ್ನು ಈಗಾಗಲೇ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಬೇಕಾದರೆ ತಾವು ಎಕ್ಸಾಮಿನ್ ಮಾಡಿ. ತಮಗೆ ಆಕ್ಟ್ ಕಾಪಿಯನ್ನು ನಾನು ಕಳಿಸಿಕೊಡುತ್ತೇನೆ. ಇನ್ನೂ ಏನಾದರೂ ಇದರಲ್ಲಿ

ಬದಲಾವಣೆ ಮಾಡಿ ಇದನ್ನು ವಿಸ್ತರಿಸಬೇಕೆಂದು ಕಂಡುಬಂದರೆ, ಸಣ್ಣಪುಟ್ಟ ದೋಷ ಇರುವುದಾದರೆ ಅದರ ಬಗ್ಗೆ ನಾವು ಆಲೋಚನೆ ಮಾಡೋಣ.

ಡಾ|| ಜೀವರಾಜ ಆಳ್ವ : ಈ ಮಾತನ್ನು ನಾನು ಏಕೆ ಹೇಳಿದೆ ಎಂದರೆ, ತಮಗೆ ನೆನಪಿರಬೇಕು, ನಮ್ಮಲ್ಲಿ ಬಹಳ ವರ್ಷಗಳ ಹಿಂದೆ, ನರ್ಸಿಂಗ್ ಹೋಮ್ಸ್ ಬಗ್ಗೆ ಒಂದು ಕಾಂಪ್ರಹೆನ್ಸೀವ್ ಬಂತು. ಅದು ನಂತರ ಜಾಯಿಂಟ್ ಕಮಿಟಿಗೆ ರೆಫರ್ ಆಯಿತು. ಕೊನೆಗೆ ವಿಧಾನಸಭೆಯಲ್ಲಿ ಗಂಟೆಗಟ್ಟಲೆ ಚರ್ಚೆಯಾಯಿತು. That is in cold storage. After all, this Government says, just to the apathy, the callousness is shown by the Department is so much, after all the Chief Minister would not know. The Government discusses. ಇದೇನಾಗುತ್ತದೆ ಎಂದರೆ ಹಿಂದಿನ ದಿವಸ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿ ಗವರ್ನರ್ ಅವರಿಗೆ ಸಾಗಿಸಿಬಿಡುತ್ತಾರೆ. And Governor reads like this. The State has large network of private sector medical institutions, hospitals and Nursing Homes and Medical Practitioners. There is a need to regulate the functioning of the private sector. A subject which has been discussed in depth, an Education Bill which has been referred to a Joint Select Committee which is still waiting, which is in cold storage. ಪುನಃ ತಂದಿದ್ದಾರೆ. ಇದೇ ಡಿಫಾಲ್ಟ್ ಅಂತ ಹೇಳುವುದು. ಮಾನ್ಯ ನಂಜೇಗೌಡರು ಹೇಳಿದ ಹಾಗೆ ಇದನ್ನು ಸರ್ಕ್ಯುಲೇಟ್ ಮಾಡಬೇಕಾಗಿತ್ತು, ನಾವು ಅದನ್ನು ನೋಡಬೇಕಾಗಿತ್ತು. ಕಾಂಪ್ರಹೆನ್ಸಿವ್ ಎಜ್ಯುಕೇಷನ್ ಬಿಲ್ ಏನಿದೆ, ಅದು ಕೋಲ್ಡ್ ಸ್ಟೋರೇಜ್‌ನಲ್ಲಿದೆ. ಅದರ ಬಗ್ಗೆ ನಾವು ಇನ್ನೂ ಕಾದಿದ್ದೇವೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಎಂದರೆ ಇದನ್ನು bureaucratic bungling - ಎಂದು ಹೇಳುವುದು. ಇಂತಹ ಒಂದು ಮುಖ್ಯ ಕನ್ವೆನ್‌ಷನ್ ಇದದಾಗ ಅದನ್ನು ಅರ್ಥಮಾಡಿಕೊಳ್ಳದೆ, ತಿಳಿದುಕೊಳ್ಳದೆ ಏನೇನೋ ಹೇಳಿಬಿಡುತ್ತಾರೆ.

ಅಧ್ಯಕ್ಷರು : ನೀವು ಬ್ಯುರೋಕ್ರಾಟ್ಸ್ ಮೇಲೆ ಬಿದ್ದರೆ ಹೇಗೆ? You are yourself a bureaucrat.

Dr. Jeevaraja Alva : Whatever you decide, it is an urgent matter. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇಷ್ಟಾದಮೇಲೂ ಗವರ್ನರ್ ಅಡ್ರೆಸ್‌ನಲ್ಲಿ ಈ ವಿಷಯ ಬಂದಿದೆ. Don't you think it is terribly callous?

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮಾನವ ಅಂಗಾಂಗಗಳ ಬದಲಿ ಜೋಡಣೆ ಅಧಿನಿಯಮ 1994 (19966ರ ಕೇಂದ್ರ ಅಧಿನಿಯಮ 42) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸತಕ್ಕದ್ದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಸದನವು ಅಂಗೀಕರಿಸಿದ ನಿರ್ಣಯವನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಕಟಿಸಲಾಗಿದೆ.

ಚಿಕಿತ್ಸೆಯ ಉದ್ದೇಶಕ್ಕಾಗಿ ಮಾನವ ಅಂಗಗಳನ್ನು ತೆಗೆಯುವುದು, ಸಂಗ್ರಹಿಸಿಡುವುದು ಮತ್ತು ಬದಲಿ ಜೋಡಣೆ ಮಾಡುವುದನ್ನು ನಿಯಂತ್ರಿಸುವುದಕ್ಕೆ ಮತ್ತು ಮಾನವ ಅಂಗಗಳ ಬಗ್ಗೆ ವಾಣಿಜ್ಯ ವ್ಯವಹಾರ ನಡೆಸುವುದನ್ನು ತಡೆಯುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪೂರಕವಾದ ಮತ್ತು ಅದಕ್ಕೆ ಅನುಷಂಗಿಕವಾದ ಎಲ್ಲಾ ವಿಷಯಗಳಿಗೆ ಭಾರತಾದಾದ್ಯಾಂತ ಏಕರೂಪವಾದ ಕಾನೂನನ್ನು ಹೊಂದಿರುವುದು ಅಪೇಕ್ಷಣೀಯವೆಂದು ಕರ್ನಾಟಕ ವಿಧಾನ ಸಭೆ ಭಾವಿಸಿರುವುದರಿಂದ;

ಮತ್ತು ಇಂಥ ಕಾನೂನಿನ ವಸ್ತು ವಿಷಯವು ಮುಖ್ಯವಾಗಿ ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2ರ 6ನೇ ನಮೂದಿಗೆ ಸಂಬಂಧಿಸಿರುವುದರಿಂದ ;

ಮತ್ತು ಮೇಲೆ ಹೇಳಲಾದ ವಿಷಯವನ್ನು ಸಂಸತ್ತು, ಕಾನೂನಿನ ಮೂಲಕ ಆಯಾ ರಾಜ್ಯಗಳಲ್ಲಿ ನಿಯಂತ್ರಿಸಬೇಕೆಂಬ ಬಗ್ಗೆ ಗೋವಾ, ಮಹಾರಾಷ್ಟ್ರ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳ ವಿಧಾನ ಮಂಡಲದ ಎಲ್ಲಾ ಸದನಗಳು ಭಾರತ ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದಡಿ ಹೊರಡಿಸಿದ ನಿರ್ಣಯಕ್ಕೆ ಅನುಸಾರವಾಗಿ, ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು (1994ರ ಕೇಂದ್ರ ಅಧಿನಿಯಮ 42) ಸಂಸತ್ತು ಅಧಿನಿಯಮಿತ ಗೊಳಿಸಿರುವುದರಿಂದ ;ಮತ್ತು ರಾಜ್ಯ ವಿಧಾನ ಮಂಡಲವು, ಮೃತ ವ್ಯಕ್ತಿಯ ಕಣ್ಣುಗಳನ್ನು ತೆಗೆಯುವುದಕ್ಕೆ ಉಪಬಂಧ ಕಲ್ಪಿಸುವ ಕರ್ನಾಟಕ ಅಕ್ಷಿಪಟಲ ಜೋಡಣೆ ಅಧಿನಿಯಮ, 1965ನ್ನು (1965ರ ಕರ್ನಾಟಕ ಅಧಿನಿಯಮ ಸಂಖ್ಯೆ 12 ಮತ್ತು ಚಿಕಿತ್ಸೆಯ ಉದ್ದೇಶಗಳಿಗಾಗಿ ಮೃತ ವ್ಯಕ್ತಿಗಳ ಮೂತ್ರ ಪಿಂಡಗಳನ್ನು ತೆಗೆಯುವುದಕ್ಕೆ ಉಪಬಂಧ ಕಲ್ಪಿಸುವ ಕರ್ನಾಟಕ ಬದಲಿ ಮೂತ್ರಪಿಂಡ ಜೋಡಣೆ ಅಧಿನಿಯಮ, 1986ನ್ನು (1986ರ ಕರ್ನಾಟಕ ಅಧಿನಿಯಮ ಸಂಖ್ಯೆ 45) ಹೊರಡಿಸಿರುವುದರಿಂದ ;

ಮತ್ತು ಮೇಲೆ ಹೇಳಲಾದ ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳುವುದು ಅಪೇಕ್ಷಣೀಯವೆಂದು ವಿಧಾನ ಸಭೆಗೆ ಕಂಡು ಬಂದಿರುವುದರಿಂದ,

ಈಗ ಭಾರತ ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಸದನವು ಮಾನವ ಅಂಗಗಳ ಬದಲಿ ಜೋಡಣೆ ಅಧಿನಿಯಮ, 1994ನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಬೇಕೆಂದು ನಿರ್ಣಯ ಕೈಗೊಂಡಿದೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ಮತ್ತು ಕೆಲವು ಹಿರಿಯ ಸದಸ್ಯರು ನಿಯಮ 69ರಡಿಯಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ತಮ್ಮನ್ನು ಕರೆದು ನಾನು ಆಮೇಲೆ ಚರ್ಚೆ ಮಾಡಿ ಯಾವ ವೇಳೆಯನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ಈಗ ಮಾನ್ಯ ನಾಗೇಗೌಡರು ಚರ್ಚೆಯನ್ನು ಮುಂದುವರಿಸುವುದು.

4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮುಂದುವರೆದ ಚರ್ಚೆ

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೇ, 1995ನೇ ಮಾರ್ಚ್ 20ರಂದು ನಮ್ಮ ಎರಡು ವಿಧಾನ ಮಂಡಲಗಳಲ್ಲೂ ರಾಜ್ಯಪಾಲರು ಮಾಡಿದಂಥ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸತಕ್ಕಂಥ ಪ್ರಸ್ತಾವನೆಯನ್ನು ಈಗಾಗಲೇ ಮಂಡಿಸಿದ್ದೇವೆ. ಇದನ್ನು ಮಾನ್ಯ ಬಸವಣ್ಣಪ್ಪನವರು ಅನುಮೋದಿಸಿದ್ದಾರೆ. ಚರ್ಚೆಯೂ ಸಹ 3-4 ನಿಮಿಷಗಳ ಕಾಲ ಆಯಿತು. ಅದಾದ ನಂತರ, ನಮ್ಮ ರಾಜ್ಯದ ಬಜೆಟ್ ಮೇಲೆ ಚರ್ಚೆಯಾಗಿ, ಉಭಯ ಸದನಗಳೂ ಸಹ ಒಪ್ಪಿ ಅದು ಅಂಗೀಕಾರವಾಯಿತು. ಆದರೆ, ಇವತ್ತಿನ ದಿವಸ, ರಾಜ್ಯಪಾಲರ ಭಾಷಣಕ್ಕೆ, ಮತ್ತು ರಾಜ್ಯಪಾಲರಿಗೆ, ಕೃತಜ್ಞತೆಯನ್ನು, ವಂದನೆಯನ್ನು ಸಲ್ಲಿಸತಕ್ಕಂಥ ಕೆಲಸ ನಮ್ಮ ವಿಧಾನ ಮಂಡಲದ ಕರ್ತವ್ಯದಲ್ಲಿ ಪ್ರಾಮುಖ್ಯವಾದ ಅಂಶವೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಆ ಅಂಶದ ಪ್ರಕಾರ ಈಗಾಗಲೇ ವಿಚಾರವನ್ನು ಪ್ರಸ್ತಾಪ ಮಾಡಲಾಗಿದೆ. ನಮ್ಮ ರಾಜ್ಯಪಾಲರು 4 ವರ್ಷಗಳಿಂದ ಇಲ್ಲಿ ರಾಜ್ಯಪಾಲರಾಗಿ, ಬಹಳ ಸೌಜನ್ಯಶೀಲರಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ರಾಜಕೀಯ